# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 302 | Pages. 2 | Date: 25-10-2025, SATURDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 302 – ಪುಟಗಳು : 2 | 25-10-2025 ಶನಿವಾರ | Ph: 8762954248 | ದರ : ₹1


# ಆದಾಯದಲ್ಲಿ ದಾಖಲೆ ಬರೆದ ಹಾಸನಾಂಬ

## 25.59 ಕೋಟಿ ರೂ. ಸಂಗ್ರಹ | ಏಳೂವರೆ ತಾಸು ಎಣಿಕೆ ಕಾರ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಕ್ತಿದೇವತೆ ಹಾಸನಾಂಬ ಹಾಗೂ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಈ ಬಾರಿ ಭಕ್ತರ ಸಂಖ್ಯೆಯಲ್ಲಿ ಮಾತ್ರವಲ್ಲದೆ ಆದಾಯದಲ್ಲೂ ದಾಖಲೆ ಬರೆದಿದೆ.

ಈ ಸಲ ಅ.9 ರಿಂದ 23 ರ ವರೆಗೆ ಜಾತ್ರಾ ಮಹೋತ್ಸವ ಜರುಗಿತು. ಈ ಅವಧಿಯಲ್ಲಿ 26,06,691 ಮಂದಿ ಭಕ್ತರು ದೇವಿಯ ದರ್ಶನ ಪಡೆದಿದ್ದಾರೆ. ಇದು ಹಾಸನಾಂಬ ಜಾತ್ರಾ ಮಹೋತ್ಸವದ ಇತಿಹಾಸದಲ್ಲೇ ಅತ್ಯಧಿಕ ಸಂಖ್ಯೆಯಾಗಿದೆ.



ಜಾತ್ರೋತ್ಸವಕ್ಕೆ ವಿಧ್ಯುಕ್ತ ತೆರೆ ಬಿದ್ದ ನಂತರ ಶುಕ್ರವಾರ ಬೆಳಗ್ಗೆಯಿಂದ ನಗರದ ತೇರಾಪಂಥ್ ಭವನದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ದೇವಾಲಯದ ಆಡಳಿತಾಧಿಕಾರಿ ಮಾರುತಿ ಅವರ ಮೇಲ್ವಿಚಾರಣೆಯಲ್ಲಿ ಬಿಗಿ ಭದ್ರತೆ ವಹಿಸಿದ್ದರು.

### ಹಾಸನಾಂಬ ಆದಾಯ ವಿವರ

| | |
|---|---|
| 2013 – 01.21 ಕೋಟಿ ರೂ | 2020 – 22.79 ಲಕ್ಷ ರೂ |
| 2014 – 01.27 ಕೋಟಿ ರೂ | 2021 – 01.54 ಕೋಟಿ ರೂ |
| 2015 – 01.46 ಕೋಟಿ ರೂ | 2022 – 03.36 ಕೋಟಿ ರೂ |
| 2016 – 02.67 ಕೋಟಿ ರೂ | 2023 – 08.72 ಕೋಟಿ ರೂ. |
| 2017 – 04.14 ಕೋಟಿ ರೂ | 2024 – 12.63 ಕೋಟಿ ರೂ. |
| 2018 – 02.68 ಕೋಟಿ ರೂ | 2025 25.59 ಕೋಟಿ ರೂ. |
| 2019 – 03.06 ಕೋಟಿ ರೂ | |

ವಿಶೇಷ ದರ್ಶನದ ಟಿಕೆಟ್ ಲಾಡು ಮಾರಾಟ ಹಾಗೂ ಕಾಣಿಕೆ ರೂಪದಲ್ಲಿ ಒಟ್ಟು 25,59,87, 327 ರೂ. ದಾಖಲೆಯ ಆದಾಯ ಸಂಗ್ರಹವಾಗಿದೆ. ಬೆಳಿಗ್ಗೆ 9 ರಿಂದ ಸಂಜೆ 4.30ರ ವರೆಗೆ ಎಣಿಕೆ ಕಾರ್ಯ ನಡೆಯಿತು.

ನಿರಂತರ ಏಳೂವರೆ ಗಂಟೆಗಳ ಕಾಲ ಸುಮಾರು 400ಕ್ಕೂ ಹೆಚ್ಚು ಸಿಬ್ಬಂದಿ ಹುಂಡಿ ಎಣಿಕೆ ಕಾರ್ಯದಲ್ಲಿ ತೊಡಗಿದ್ದರು. 25ಕ್ಕೂ ಹೆಚ್ಚು ಬ್ಯಾಂಕ್ ಸಿಬ್ಬಂದಿ ಹುಂಡಿ ಹಣ ಎಣಿಕೆ ಸ್ಥಳದಲ್ಲಿದ್ದು ಎಣಿಕೆಯಾದ ಹಣವನ್ನು ಬ್ಯಾಂಕ್‌ಗೆ ಕೊಂಡೊಯ್ದರು. ಇದಲ್ಲದೆ ಕಾಣಿಕೆ ರೂಪದಲ್ಲಿ 75 ಗ್ರಾಂ 300 ಮಿಲಿ ಚಿನ್ನ, 1 ಕೆಜಿ 58 ಗ್ರಾಂ 400 ಮಿಲಿ ಬೆಳ್ಳಿಯನ್ನು ಭಕ್ತರು ನೀಡಿದ್ದಾರೆ.

ಪ್ರತಿವರ್ಷ ಕಾಣಿಕೆ ರೂಪದಲ್ಲಿ ಕೋಟಿ ಕೋಟಿ ಆದಾಯ ಹರಿದು ಬರುತ್ತಿದ್ದು, ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ.

ಈ ಬಾರಿ ವಿಶೇಷ ದರ್ಶನದ 1000 ರೂ., 300 ರೂ. ಟಿಕೆಟ್ ಮತ್ತು ಲಾಡು ಮಾರಾಟದಿಂದ 21, 91,75,052 ರೂ., ಹುಂಡಿಯಲ್ಲಿ 3, 68,12,275 ರೂ. ಸೇರಿ ಒಟ್ಟು 25,59,87,327 ರೂ. ಸಂಗ್ರಹವಾಗಿದೆ.

### ವಿದೇಶಿ ಕರೆನ್ಸಿಗಳು ಪತ್ತೆ

ದೇವರ ಹುಂಡಿಯಲ್ಲಿ ವಿದೇಶಿ ಕರೆನ್ಸಿಗಳನ್ನು ಭಕ್ತರು ಹಾಕಿದ್ದು ಇಂಡೋನೇಷಿಯಾ-263 ರೂ, ನೇಪಾಳ-3.13 ರೂ, ಮಲೇಷಿಯಾ-28.75 ರೂ, ಯುಎಸ್ಎ-526 ರೂ, ಮಾಲ್ಡೀವ್ಸ್-57.29 ರೂ, ಕೆನಡಾ-6259 ರೂ, ಕುವೈತ್-286 ರೂ, ಯುಎಇ-239 ರೂ ಸೇರಿದಂತೆ 7653 ರೂ ವಿದೇಶಿ ಕರೆನ್ಸಿ ಯನ್ನು ಭಕ್ತರು ಹಾಕಿದ್ದಾರೆ. ಇದರ ಜೊತೆಗೆ 42,530 ಹಳೇ ನೋಟುಗಳು, 20 ರೂ.ನ ನಕಲಿ ನೋಟನ್ನು ಹುಂಡಿಯಲ್ಲಿ ಹಾಕಲಾಗಿದೆ. ಸಿದ್ದೇಶ್ವರಸ್ವಾಮಿ ದೇವಾಲಯ ಪ್ರತ್ಯೇಕ ಅಕೌಂಟ್ ಹೊಂದಿದ್ದು ಅದರ ಹುಂಡಿ ಎಣಿಕೆ ಕಾರ್ಯವೂ ನಡೆಯಿತು. ಈ ಬಾರಿ 15,17,785 ರೂ ಹಣವನ್ನು ಭಕ್ತರು ಕಾಣಿಕೆ ರೂಪದಲ್ಲಿ ಸಿದ್ದೇಶ್ವರಸ್ವಾಮಿ ಹುಂಡಿಗೆ ಹಾಕಿದ್ದಾರೆ. ಭಕ್ತರು ದೇವರಿಗೆ ಬರೆದ ಸಾವಿರಾರು ಬೇಡಿಕೆ ಪತ್ರಗಳನ್ನು ಹುಂಡಿಯಲ್ಲಿ ಹಾಕಿದ್ದು, ಯಾರೂ ಕೂಡ ಪತ್ರಗಳನ್ನು ತೆರೆದು ನೋಡದಂತೆ ಆದೇಶ ಹೊರಡಿಸಲಾಗಿತ್ತು. ಆದ್ದರಿಂದ ಭಕ್ತರ ಹರಕೆಗಳು, ಬೇಡಿಕೆಗಳು ಬಹಿರಂಗವಾಗಲಿಲ್ಲ. ಬ್ಯಾಂಕ್ ಸಿಬ್ಬಂದಿ ನೋಟುಗಳನ್ನು ಮಿಷನ್‌ಗಳಲ್ಲಿ ಎಣಿಸಿ ಬಂಡಲ್ ಕಟ್ಟಿ ಸುಪರ್ದಿಗೆ ಪಡೆದರು.

# ಸಾರ್ವಜನಿಕ ರಸ್ತೆಯಲ್ಲಿ ನಮಾಜ್ ಬೇಡ: ಮನವಿ



ಹಾಸನ: ಸಾರ್ವಜನಿಕ ರಸ್ತೆಗಳಲ್ಲಿ ನಮಾಜ್ ನಡೆಸುವ ಪದ್ಧತಿಗೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಶುಕ್ರವಾರ ಜಿಲ್ಲಾಡಳಿತ ಮೂಲಕ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಶ್ರೀರಾಮ ಸೇನೆ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಜಾನೆಕೆರೆ ಹೇಮಂತ್ ಮಾತನಾಡಿ, ನಮಾಜ್ ಹೆಸರಿನಲ್ಲಿ ಸಾರ್ವಜನಿಕ ರಸ್ತೆ, ಸರ್ಕಾರಿ ಆವರಣ ಬಳಸಿಕೊಳ್ಳುವುದು ಮಾತ್ರವಲ್ಲದೆ ಸೌಲಭ್ಯಗಳ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಯಾವುದೇ ಸಾರ್ವಜನಿಕ ಕಾರ್ಯಕ್ರಮ ಮಾಡಬೇಕೆಂದರೂ ಸರ್ಕಾರದ ಅನುಮತಿ ಬೇಕು. ಆದರೆ ಪ್ರತಿ ಶುಕ್ರವಾರ ನಡೆಯುವ ನಮಾಜ್‌ಗೆ ಯಾವ ಅನುಮತಿ ಪಡೆಯುವುದಿಲ್ಲ ಎಂದು ಆರೋಪಿಸಿದರು.

ಹಿಂದೂ ಹಬ್ಬ, ಜಾತ್ರೆ, ಗಣೇಶೋತ್ಸವ ಮತ್ತು ರಾಮ ನವಮಿ ಮೆರವಣಿಗೆಗಳಿಗೆ ಕಟ್ಟುನಿಟ್ಟಿನ ನಿಯಮ ಹೇರಲಾಗುತ್ತದೆ. ರಸ್ತೆ ಮೇಲೆ ನಡೆಯುವ ನಮಾಜ್ ಕುರಿತು ಸರ್ಕಾರ ಮೌನ ವಹಿಸುವುದು ಖಂಡನೀಯ. ರಸ್ತೆಯಲ್ಲಿ ಕಾರ್ಯಕ್ರಮ ನಡೆಸಲು ಪೂರ್ವಾನುಮತಿ ಕಡ್ಡಾಯ. ಆದರೆ ಕೆಲವಡೆ ಪೊಲೀಸರ ಅನುಮತಿ ಪಡೆಯದೆ ಸಂಚಾರ ದಟ್ಟಣೆಗೆ ಕಾರಣವಾಗುತ್ತದೆ. ಇನ್ನಾದರೂ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಶ್ರೀ ರಾಮಸೇನೆ ಜಿಲ್ಲಾ ಉಪಾಧ್ಯಕ್ಷ ಕೆ.ಕೆ. ಪುನೀತ್, ಪ್ರಧಾನ ಕಾರ್ಯದರ್ಶಿ ಎಂ.ಜಿ. ಧರ್ಮನಾಯಕ್, ನಗರಾಧ್ಯಕ್ಷ ದರ್ಶನ ಮಹೇಶ್, ಕಾರ್ಯಾಧ್ಯಕ್ಷ ವಿನಯ್, ಗೋರಕ್ಷಕ ಅಮಿತ್, ಅರಕಲಗೂಡು ತಾಲ್ಲೂಕು ಅಧ್ಯಕ್ಷ ಮಂಜುನಾಥ್ ಇತರರಿದ್ದರು.

# ವಿಶೇಷ ಚೇತನ ಮಗು ದತ್ತು ಪಡೆದ ಅಮೆರಿಕ ಮೂಲದ ದಂಪತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿಶೇಷ ವೈದ್ಯಕೀಯ ಅವಶ್ಯಕತೆ ಹೊಂದಿದ ಎರಡು ವರ್ಷದ ಹೆಣ್ಣು ಮಗು ದೂರದ ಅಮೆರಿಕದ ಮಿಸ್ಸೋರಿ ರಾಜ್ಯದ ವಿಲಿಯಮ್ ಮತ್ತು ಆಶ್ಲೀ ದಂಪತಿ ಜೀವನದಲ್ಲಿ ಹೊಸ ಬೆಳಕಾಗಿದ್ದಾಳೆ.

ನಗರದ ತವರು ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಮಾನವೀಯತೆ ಮತ್ತು ಪ್ರೀತಿ ತುಂಬಿದ ಅಪರೂಪದ ಘಟನೆಗೆ ಸಾಕ್ಷಿಯಾಗಿದೆ. ಟ್ರಸ್ಟ್‌ನಲ್ಲಿ ನಡೆದ ಈ ಹೃದಯಸ್ಪರ್ಶಿ ಕಾರ್ಯಕ್ರಮದಲ್ಲಿ ಮಗು ತನ್ನ ಎರಡನೇ ವರ್ಷದ ಹುಟ್ಟುಹಬ್ಬವನ್ನು ಹೊಸ ಪೋಷಕರೊಂದಿಗೆ ಆಚರಿಸಿತು. ನಗು, ಕಣ್ಣೀರು ಮತ್ತು ಸಂತೋಷದ ಮಿಶ್ರಣವಾಗಿದ್ದ ಈ ಕ್ಷಣ ಎಲ್ಲರ ಮನವನ್ನೂ ಸ್ಪರ್ಶಿಸಿತು.

ಕಳೆದ ಎರಡು ವರ್ಷಗಳಿಂದ ಟ್ರಸ್ಟ್‌ನ ಆಶ್ರಯದಲ್ಲಿ ಬೆಳೆದ ಮಗು ಜನ್ಮದಿಂದಲೇ ಕೆಲವು ವೈದ್ಯಕೀಯ ಸವಾಲುಗಳನ್ನು ಎದುರಿಸುತ್ತಿದ್ದಳು. ಆಕೆಯ ಆರೈಕೆ, ಶಿಕ್ಷಣ ಮತ್ತು ವೈದ್ಯಕೀಯ ಚಿಕಿತ್ಸೆಗೆ ತವರು ಸಂಸ್ಥೆಯವರು ಶ್ರಮಿಸಿದ್ದಾರೆ. ಅಮೆರಿಕದ ದಂಪತಿಯಾದ ವಿಲಿಯಮ್ ಮತ್ತು ಆಶ್ಲೀ ಅವರು ಆಕೆಯ ಬಗ್ಗೆ ತಿಳಿದುಕೊಂಡ ಬಳಿಕ, ಕಾನೂನಿನ ಪ್ರಕಾರ ಎಲ್ಲಾ ದತ್ತು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಭಾರತದ ಸಂಬಂಧಿತ ಇಲಾಖೆಗಳ ಅನುಮೋದನೆ ಪಡೆದು ಆಕೆಯನ್ನು ತಮ್ಮ ವಶಕ್ಕೆ ಪಡೆದರು. ದತ್ತು ಪ್ರಕ್ರಿಯೆ ಪೂರ್ಣಗೊಂಡ ನಂತರ ಮಗಳ ಹುಟ್ಟುಹಬ್ಬವನ್ನು ತವರು ಪಬ್ಲಿಕ್ ಚಾರಿಟಬಲ್ ಟ್ರಸ್ಟ್‌ನಲ್ಲಿ ಆಚರಿಸಿದರು. ಕೇಕ್ ಕತ್ತರಿಸಿದ ಪುಟ್ಟ ಮಗಳು



ನಗುಮೊಗದಿಂದ ಎಲ್ಲರಿಗೂ ಸಂತೋಷ ಹಂಚಿದಳು. ವಿಲಿಯಮ್ ಮತ್ತು ಆಶ್ಲೀ ದಂಪತಿ ಈ ಮಗಳು ನಮ್ಮ ಜೀವನದ ಅತಿ ಅಮೂಲ್ಯ ವರ ಎಂದು ಭಾವುಕರಾದರು.

ಎರಡು ವರ್ಷದ ಮಗು ಹಲವು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದೆ. ಅವಧಿಪೂರ್ವ ಜನಿಸಿದ ಮಗು ಕಡಿಮೆ ತೂಕ ಹೊಂದಿತ್ತು. ಹೃದಯದಲ್ಲಿ ರಂಧ್ರವಿದ್ದರಿಂದ ಜನಿಸಿದಾಗಲೇ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಕಣ್ಣಿನ ಶಸ್ತ್ರಚಿಕಿತ್ಸೆ ಸಹ ಆಗಿದೆ. ಮಗುವಿನ ಮಾಹಿತಿಯನ್ನು ಕೇಂದ್ರ ಸರ್ಕಾರದ ಕಾರಾ (ಸೆಂಟ್ರಲ್ ಅಡಾಪ್ಷನ್ ರಿಸೋರ್ಸ್ ಅಥಾರಿಟಿ) ವೆಬ್‌ಸೈಟ್‌ನಲ್ಲಿ ದಾಖಲಿಸಲಾಗಿತ್ತು. ಅದನ್ನು ಆಧರಿಸಿ ಅಮೇರಿಕಾದ ದಂಪತಿ ನಮ್ಮನ್ನು ಸಂಪರ್ಕಿಸಿ ಬಾಲ ನ್ಯಾಯ ಕಾಯ್ದೆ ಅನ್ವಯ ಮಗುವನ್ನು ದತ್ತು ಪಡೆದು ಮಾನವೀಯತೆ ಮೆರೆದಿದ್ದಾರೆಂದು ಡಾ. ಪಾಲಾಕ್ಷ ತಿಳಿಸಿದರು.

ಸಂಸ್ಥೆಯ ಮುಖ್ಯಸ್ಥ ಡಾ. ಪಾಲಾಕ್ಷ, ಟ್ರಸ್ಟಿ ಮಧುಪ್ರಿಯ, ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಶ್ರೀರಂಗ, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ರವಿ, ರಂಗಸ್ವಾಮಿ ಇತರರಿದ್ದರು.

# ಕಚೇರಿ ಕಡತಗಳಿಗೆ ಬೆಂಕಿ ಸಿಸಿಟಿವಿಯಲ್ಲಿ ಸುಳಿವು ಪತ್ತೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪುರಸಭೆ ಮುಖ್ಯಾಧಿಕಾರಿ ಕಚೇರಿಯ ಕಡತಗಳಿಗೆ ದುಷ್ಕರ್ಮಿಯೊಬ್ಬ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದು ಪ್ರಮುಖ ದಾಖಲೆಗಳು ಬೆಂಕಿಗಾಹುತಿಯಾಗಿವೆ.

ಬಾಟಲಿಯಲ್ಲಿ ಪೆಟ್ರೋಲ್ ತಂದು ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರ ಕೊಠಡಿಗೆ ಸುರಿದು ಬೆಂಕಿ ಹಚ್ಚಲಾಗಿದೆ. ಪರಿಣಾಮ ದಾಖಲೆ ಪತ್ರಗಳು ಸುಟ್ಟು ಕರಕಲಾಗಿವೆ. ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರು ಪುರಸಭಾ ಸದಸ್ಯರೊಂದಿಗೆ ಗೋವಾ ಪ್ರವಾಸದಲ್ಲಿದ್ದಾರೆ. ಕಚೇರಿಯಲ್ಲಿ ಯಾರೂ ಇಲ್ಲದ ವೇಳೆ ಹಿಂಬದಿಯಿಂದ ನುಗ್ಗಿದ ದುಷ್ಕರ್ಮಿ ಬೆಂಕಿ ಹಚ್ಚಿ ಪರಾರಿಯಾಗಿದ್ದಾನೆ ಎಂದು ಶಂಕಿಸಲಾಗಿದೆ. ಮುಖ್ಯಾಧಿಕಾರಿ ಕೊಠಡಿಯಲ್ಲಿ ಯಾರೂ ಇರದ ಕಾರಣದಿಂದ ಭಾರೀ ಅನಾಹುತ ತಪ್ಪಿದೆ. ವ್ಯಾಪಾರ ಪರವಾನಗಿ ನೀಡದ



ಹಿನ್ನಲೆ ದ್ವೇಷದಿಂದ ಕೃತ್ಯ ಎಸಗಿದ್ದಾನೆಂಬ ಶಂಕೆ ವ್ಯಕ್ತವಾಗಿದೆ. ಪುರಸಭೆ ಕಚೇರಿ ಪೊಲೀಸ್ ಠಾಣೆಯ ಅನತಿ ದೂರದಲ್ಲೇ ಇರುವುದರಿಂದ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ.

ಸ್ಥಳ ಪರಿಶೀಲಿಸಿ ನಂತರ ಮಾತನಾಡಿದ ಶಾಸಕ ಸಿಮೆಂಟ್ ಮಂಜು ಅವರು, ವ್ಯಕ್ತಿಯೊಬ್ಬ ಪುರಸಭೆ ಸಿಬ್ಬಂದಿ ಜೊತೆಗೆ ಅನುಚಿತವಾಗಿ ವರ್ತಿಸಿ, ನಂತರ ಮುಖ್ಯಾಧಿಕಾರಿ ಕಚೇರಿಯೊಳಗೆ ಬೆಂಕಿ ಹಚ್ಚಿದನೆಂದು ತಿಳಿದುಬಂದಿದೆ.

ಸಿಸಿಟಿವಿ ದೃಶ್ಯಗಳಲ್ಲಿ ವ್ಯಕ್ತಿಯೊಬ್ಬ ಬೆಂಕಿ ಹಚ್ಚುತ್ತಿರುವುದು ದಾಖಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ ಲಿಂಗರಾಜು ಎಂಬಾತ ತನ್ನ ಕೆಲಸ ಆಗದ ಹಿನ್ನಲೆಯಲ್ಲಿ ಕೋಪಗೊಂಡು ಈ ಕೃತ್ಯ ಎಸಗಿದ್ದಾನೆಂದು ತಿಳಿದುಬಂದಿದೆ ಎಂದರು.

ಅಧಿಕಾರಿಗಳು ತಕ್ಷಣ ಬೆಂಕಿ ನಂದಿಸಿ ಹೆಚ್ಚಿನ ಹಾನಿ ತಪ್ಪಿಸಿದ್ದಾರೆ. ಅಧಿಕಾರಿಗಳು ಭಯದ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಸ್ಥಿತಿ ಉಂಟಾಗಬಾರದು. ಪೊಲೀಸರು ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

# ಮನೆ ಗೋಡೆ ಕುಸಿದು ವೃದ್ಧೆ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಧಾರಾಕಾರ ಮಳೆಗೆ ಮನೆ ಗೋಡೆ ಕುಸಿದು ವೃದ್ಧೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮತ್ತಿಗೋಡು ಗ್ರಾಮದಲ್ಲಿ ನಡೆದಿದೆ.

ಜವರಮ್ಮ (63) ಮೃತರು. ಶುಕ್ರವಾರ ರಾತ್ರಿ 1ರ ಸಮಯದಲ್ಲಿ ಮನೆಯಲ್ಲಿ ಜವರಮ್ಮ ಹಾಗೂ ಅವರ ಪುತ್ರ ಮಲಗಿದ್ದರು. ಈ ವೇಳೆ ಮಳೆಯಿಂದ ಶೀತಗೊಂಡಿದ್ದ ಗೋಡೆ ಕುಸಿದು ಬಿದ್ದಿದ್ದು ಜವರಮ್ಮ ಸ್ಥಳದಲ್ಲೇ



ಸಾವನ್ನಪ್ಪಿದ್ದಾರೆ. ಅದೃಷ್ಟವಶಾತ್ ಜವರಮ್ಮನ ಪುತ್ರ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಸ್ಥಳೀಯ ಶಾಸಕ ಎ.ಮಂಜು ಭೇಟಿ ನೀಡಿ ಪರಿಶೀಲನೆ ನಡೆಸಿ, ಪರಿಹಾರ ದೊರಕಿಸಿಕೊಡುವ ಭರವಸೆ ನೀಡಿದ್ದಾರೆ. ಮಹಿಳೆಯ ಮೃತದೇಹವನ್ನು ಕೊಣನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅ.28 ರಂದು ಸುವರ್ಣ ಮಹೋತ್ಸವ

ಹಾಸನ: ಜಿಲ್ಲಾಡಳಿತ ಹಾಸನ ಹಾಗೂ ಚಿಕ್ಕಮಗಳೂರು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸಹಯೋಗದಲ್ಲಿ ಅ.28ರ ಮಧ್ಯಾಹ್ನ 2 ಗಂಟೆಗೆ ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಂಸ್ಥಾಪನೆಗೊಂಡು 50 ವರ್ಷಗಳಾದ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಆಯೋಜಿಸಲಾಗಿದೆ. ಶಾಸಕ ಹೆಚ್.ಪಿ. ಸ್ವರೂಪ್ ಸಮಾರಂಭದ ಅಧ್ಯಕ್ಷತೆ ವಹಿಸುವರು. ಸಂಸದ ಶ್ರೇಯಸ್ ಪಟೇಲ್, ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಅನಿವಾಸಿ ಭಾರತೀಯ ಕೋಶದ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ ಮತ್ತಿತರರು ಭಾಗವಹಿಸಲಿದ್ದಾರೆ.

# ಡಿಕೆಶಿ ಮುಖ್ಯಮಂತ್ರಿ ಆಗಲೆಂದು ವಿಶೇಷ ಪ್ರಾರ್ಥನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶೀಘ್ರ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಬೇಕೆಂದು ಪ್ರಾರ್ಥಿಸಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪುರದಮ್ಮ ದೇವಿಗೆ ವಿಶೇಷ ಹರಕೆ ಸಲ್ಲಿಸಿದ್ದಾರೆ.

ಕಟ್ಟಾಯ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಹೇಮಂತ್ ಹಾಗೂ ಬೆಂಬಲಿಗರು ದೇವಸ್ಥಾನ ಆವರಣದಲ್ಲಿ 101 ಈಡುಗಾಯಿ ಒಡೆದು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ರಾಜ್ಯದ ಉಪಮುಖ್ಯಮಂತ್ರಿಯಾಗಿ, ಬೆಂಗಳೂರು ನಗರಾಭಿವೃದ್ಧಿ ಹಾಗೂ ಜಲ ಸಂಪನ್ಮೂಲ ಸಚಿವರಾಗಿ ಡಿ.ಕೆ. ಶಿವಕುಮಾರ್ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿಯಾಗುವ ಅರ್ಹತೆ ಎಲ್ಲವೂ ಇದ್ದು ಹೈಕಮಾಂಡ್ ಅವರನ್ನೇ ಪರಿಗಣಿಸಬೇಕೆಂದು ಹೇಮಂತ್ ಒತ್ತಾಯಿಸಿದರು.

ರಾಜ್ಯದ ಸಮಗ್ರ ಅಭಿವೃದ್ಧಿ, ಸರ್ವ ಸಮಾಜದ ಬಗ್ಗೆ ಪ್ರೀತಿ ಹೊಂದಿರುವ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದರೆ ಕರ್ನಾಟಕ ಮತ್ತಷ್ಟು ಅಭಿವೃದ್ಧಿ ಹೊಂದುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ಪಾಲಿಕೆ ವಿಶೇಷ ಸಭೆ: 72 ಕೋಟಿ ರೂ. ಕಾಮಗಾರಿಗೆ ಅನುಮೋದನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಸರ್ವತೋಮುಖ ಅಭಿವೃದ್ಧಿಗೆ ಒಟ್ಟು 72 ಕೋಟಿ ಗೂ. ಅಧಿಕ ವೆಚ್ಚದ ಕಾಮಗಾರಿಗಳಿಗೆ ಮಹಾನಗರ ಪಾಲಿಕೆ ಅನುಮೋದನೆ ನೀಡಿದೆ ಎಂದು ಮೇಯರ್ ಗಿರೀಶ್ ಚನ್ನವೀರಪ್ಪ ತಿಳಿಸಿದರು.

ನಗರದ ರಾಷ್ಟ್ರಕವಿ ಕುವೆಂಪು ಸಭಾಂಗಣದಲ್ಲಿ ಶುಕ್ರವಾರ ನಡೆದ ಮಹಾನಗರ ಪಾಲಿಕೆಯ ವಿಶೇಷ ಸಭೆಯಲ್ಲಿ ಕಾಮಗಾರಿಗೆ ಅನುಮೋದನೆಗೆ ಸದಸ್ಯರ ಸಮ್ಮತಿ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ನಗರದ ಅಭಿವೃದ್ಧಿ ಯೋಜನೆಗೆ ಎಲ್ಲಾ ಸದಸ್ಯರು ಪಕ್ಷಪಾತವಿಲ್ಲದೆ ಸರ್ವಾನುಮತದಿಂದ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು. ಕಳೆದ ಫೆ. 7 ಮತ್ತು 18 ರಂದು ಮಾಜಿ ಮೇಯರ್ ಎಂ. ಚಂದ್ರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾದ ಸುಮಾರು 6 ಕೋಟಿ ರೂ. ವೆಚ್ಚದ 37 ಕಾಮಗಾರಿಗೆ ಅನುಮೋದನೆ ನೀಡಲಾಗಿದ್ದು, ಸೆ. 25ರಂದು ನಡೆದ ಸಾಮಾನ್ಯ ಸಭೆಯಲ್ಲಿ 17 ಕೋಟಿ ರೂ. ವೆಚ್ಚದ 82 ಕಾಮಗಾರಿಗಳಿಗೆ ಸಹ ಸರ್ವಾನುಮತದಿಂದ ಅನುಮೋದನೆ ದೊರೆತಿದೆಯೆಂದರು. ಅದೇ ರೀತಿ, 24 ಕೋಟಿ ರೂ. ಮೌಲ್ಯದ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದ ಎರಡು ಟೆಂಡರ್ ಪ್ರಕ್ರಿಯೆಗಳಿಗೂ ಸದಸ್ಯರ ಸಮ್ಮತಿ ದೊರೆತಿದ್ದು, ಸ್ಥಳೀಯ ಶಾಸಕ ಹೆಚ್.ಪಿ. ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಹಾಗು ಸಂಸದ ಶ್ರೇಯಸ್ ಪಟೇಲ್ ಒಪ್ಪಿಗೆ ನೀಡಿದ್ದಾರೆ ಎಂದರು.

ಸ್ಥಳೀಯ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ರಾಜ್ಯ ಸರ್ಕಾರ 25 ಕೋಟಿ ರೂ. ಅನುದಾನ ಬಿಡುಗಡೆ ಮಾಡುತ್ತಿದ್ದು, ಅದರಲ್ಲಿಂದ 6.25 ಕೋಟಿ ರೂ. ಮೊತ್ತವನ್ನು ನಗರದ ಅಭಿವದ್ಧಿಗೆ ಮೀಸಲಿಡಲು ಪಾಲಿಕೆ ಅನುಮೋದನೆ ನೀಡಿದೆ. ಈ ಮೊತ್ತವನ್ನು ಅಗತ್ಯಾನುಸಾರ ಪ್ರತಿ ವಾರ್ಡ್‌ನ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುವುದು ಎಂದು ಮೇಯರ್ ವಿವರಿಸಿದರು.

# 21 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅರಸೀಕೆರೆ ತಾಲ್ಲೂಕು ಗಂಡಸಿ ಹಾಗೂ ಹಾಸನ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಮನೆಗಳವು ಪ್ರಕರಣದಲ್ಲಿ 21 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿದೆ.

ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 1.41,750 ರೂ. ಮೌಲ್ಯದ ಚಿನ್ನಾಭರಣ ಮತ್ತು 5 ಸಾವಿರ ರೂ. ನಗದು ಕದ್ದಿರುವ ಘಟನೆ ಹಾಸನ ತಾಲ್ಲೂಕಿನ ಕೆಲವತ್ತಿ ಗ್ರಾಮದಲ್ಲಿ ಅ. 23 ರಂದು ನಡೆದಿದೆ. ಸಿದ್ದಗಂಗಮ್ಮ ಅವರ ಮನೆಯಲ್ಲಿ ಕಳ್ಳತನವಾಗಿದೆ. ಅವರು ಮನೆಗೆ ಬೀಗ ಹಾಕಿ ಸಹೋದರನ ಊರಾದ ಜಾವಗಲ್ ಹೋಬಳಿ ವೃಂದನಹಳ್ಳಿಗೆ ತೆರಳಿದ್ದರು. ವಾಪಾಸ್ ಮನೆಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ತಿಳಿದಿದೆ. 14 ಗ್ರಾಂ ತೂಕದ 2 ಜೊತೆ ಚಿನ್ನದ ಓಲೆ, 5 ಗ್ರಾಂ ತೂಕದ ಚಿನ್ನದ ತಾಳಿ, 30 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕುಂಕುಮ ಬಟ್ಟಲು, 10 ಗ್ರಾಂ ತೂಕದ ಬೆಳ್ಳಿ ಉಂಗುರ, 10 ಗ್ರಾಂ ತೂಕದ ಒಂದು ಬೆಳ್ಳಿಯ ಲಿಂಗದ ಕಾಯಿ, 15 ಗ್ರಾಂ ತೂಕದ ಬೆಳ್ಳಿ ಕಾಯಿನ್ ಕಳವು ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಗಿದೆ.

ಮತ್ತೊಂದು ಪ್ರಕರಣದಲ್ಲಿ ಅರಸೀಕೆರೆ ತಾಲ್ಲೂಕು ಗಂಡಸಿ ಹ್ಯಾಂಡ್ ಪೋಸ್ಟ್‌ನ ಸುಮಿತ್ರ ಎಂಬುವರ ಮನೆಯಲ್ಲಿ 2.60 ಲಕ್ಷ ರೂ. ನಗದು ಹಾಗೂ 17,00670 ರೂ. ಬೆಲೆಯ ಚಿನ್ನಾಭರಣ ಕದ್ದಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ಸುಮಿತ್ರ ಅವರು ಮಾತ್ರೆ ನುಂಗಿ ಮಲಗಿದ್ದರು. ಸಂಜೆ 5 ಗಂಟೆಗೆ ಮಗಳು ರೂಮ್ ನೋಡಿದಾಗ ಬೀರುವಿನ ಬಾಗಿಲು ತೆರೆದಿರುವುದು ಗೊತ್ತಾಗಿದೆ. ಅದನ್ನು ಪರಿಶೀಲಿಸಿದಾಗ ಹಾಡಹಗಲೇ ಕಳ್ಳರು ಒಳಪ್ರವೇಶಿಸಿ ಕಳ್ಳತನ ಮಾಡಿರುವುದು ಗೊತ್ತಾಗಿದೆ. ಡ್ರೆಸಿಂಗ್ ಟೇಬಲ್ ಮೇಲಿಟ್ಟಿದ್ದ ಬೀರುವಿನ ಕೀ ತೆಗೆದು ಸೇಪ್ಟಿ ಲಾಕರ್‌ನಿಂದ 166 ಗ್ರಾಂ ತೂಕದ ಚಿನ್ನಾಭರಣ ಮತ್ತು ಹಣ ದೋಚಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗುಮ್ಮಡಿ ನರಸಯ್ಯ ಎಂಬ ನೈಜ ಜನನಾಯಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಜನಮನದಲ್ಲಿ ಶಾಶ್ವತ ಗುರುತು ಬರೆದ ಆದಿವಾಸಿ ಹೋರಾಟಗಾರ ತೆಲಂಗಾಣದ ಯೆಲ್ಲಾಂಡು ಪ್ರದೇಶದ ಜನರು ಅವರನ್ನು ಪ್ರೀತಿಯಿಂದ 'ನರಸಯ್ಯಾ' ಎಂದು ಕರೆಯುತ್ತಾರೆ. ಗುಮ್ಮಡಿ ನರಸಯ್ಯ ರಾಜಕೀಯದಲ್ಲಿ ನೈತಿಕತೆ, ಸರಳತೆ ಮತ್ತು ಜನಪ್ರೇಮದ ಪ್ರತೀಕ. ಐದು ಬಾರಿ ವಿಧಾನಸಭೆ ಸದಸ್ಯರಾಗಿದ್ದರೂ ಅವರು ಅಧಿಕಾರಕ್ಕಿಂತ ಜನರ ಸೇವೆಯನ್ನು ಜೀವನ ಧ್ಯೇಯವನ್ನಾಗಿ ಮಾಡಿಕೊಂಡಿದ್ದರು. ಅವರ ಜೀವನ ಚರಿತ್ರೆ ಆಧರಿತ ಗುಮ್ಮಡಿ ನರಸಯ್ಯ ಚಲನಚಿತ್ರದ ಪೋಸ್ಟರ್ ಬಿಡುಗಡೆಯಾಗುತ್ತಿದ್ದಂತೆ ಅವರು ಯಾರು ಎನ್ನುವ ಪ್ರಶ್ನೆ ಎಲ್ಲರಲ್ಲೂ ಮೂಡಿದೆ.

### ಆರಂಭಿಕ ಜೀವನ

ಭದ್ರಾದ್ರಿ ಕೋಠಗೂಡೆಂ ಜಿಲ್ಲೆಯ ಯೆಲ್ಲಾಂಡು ಪ್ರದೇಶದ ಕೋಯಾ ಜನಾಂಗದ ಕುಟುಂಬದಲ್ಲಿ ಜನಿಸಿದ ನರಸಯ್ಯ, ಬಾಲ್ಯದಿಂದಲೇ ರೈತರ ಕಷ್ಟವನ್ನು ಕಂಡು ಬೆಳೆದವರು. 1978ರಲ್ಲಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ ಅವರು, ಸಿಪಿಐ (ಎಂಎಲ್) ನ್ಯೂ ಡೆಮಾಕ್ರಸಿ ಪಕ್ಷದೊಂದಿಗೆ ಜನಪರ ಹೋರಾಟ ಪ್ರಾರಂಭಿಸಿದರು.

1983ರಲ್ಲಿ ಯೆಲ್ಲಾಂಡು ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾದ ನರಸಯ್ಯ ನಂತರದ ನಾಲ್ಕು ಚುನಾವಣೆಯಲ್ಲಿಯೂ ಜನರ ಆಶೀರ್ವಾದ ಪಡೆದು ಗೆಲುವು ಸಾಧಿಸಿದರು.

### ಜನರ ಪರ ಧ್ವನಿಯಾದ ನಾಯಕ

ನರಸಯ್ಯ ಅವರ ರಾಜಕೀಯ ಪಯಣವೆಂದರೆ ಹೋರಾಟಗಳ ಸರಮಾಲೆ. 2000ರಲ್ಲಿ ವಿದ್ಯುತ್ ಶುಲ್ಕ ಏರಿಕೆಯ ವಿರುದ್ಧ ನಡೆದ ಬೃಹತ್ ಪ್ರತಿಭಟನೆಯಲ್ಲಿ ಅವರು ಮುಂಚೂಣಿಯಲ್ಲಿದ್ದರು. ಅರಣ್ಯ ಹಕ್ಕುಗಳು, ರೈತರ ದುರ್ಬಳಕೆ, ಗಿರಿಜನರ ಮೇಲಿನ ದೌರ್ಜನ್ಯ ಎಲ್ಲದರ ವಿರುದ್ಧ ಅವರ ಧ್ವನಿ ಗುಡುಗಿದಂತಿತ್ತು. ನಾಯಕತ್ವ ಎಂದರೆ ಅಧಿಕಾರವಲ್ಲ ಅದು ಜನರ ಸೇವೆ.




ಗುಮ್ಮಡಿ ನರಸಯ್ಯ

ವಿಧಾನಸೌಧಕ್ಕೆ ಸೈಕಲ್‌ನಲ್ಲಿ ಬರುವ ಅವರ ಸರಳ ಜೀವನಶೈಲಿ ಇಂದಿನ ರಾಜಕೀಯ ನೈತಿಕತೆಯ ಪಾಠವಾಗಿದೆ. ನರಸಯ್ಯ ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಅವರ ಕಿರಿಯ ಪುತ್ರಿ ಗುಮ್ಮಡಿ ಅನುರಾಧಾ ಹೈದರಾಬಾದ್‌ನ ಒಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕಾನೂನು ಸಹಾಯಕ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕುಟುಂಬವು ಸದಾ ಅವರ ಹೋರಾಟದ ಬಲವಾಗಿತ್ತು. 2018ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೂ ಸೋಲನ್ನು ನಗೆಮುಖದಿಂದ ಸ್ವೀಕರಿಸಿದ ನರಸಯ್ಯ ಜನಮೆಚ್ಚುಗೆ ನನ್ನ ನಿಜವಾದ ಗೆಲುವು ಎಂದಿದ್ದರು.

### ನರಸಯ್ಯ ಅವರ ಸಾಧನೆಗಳು

**1978:** ರಾಜಕೀಯ ಪ್ರವೇಶ ಸಿಪಿಐ (ಎಂಎಲ್) ನ್ಯೂ ಡೆಮಾಕ್ರಸಿ ಸೇರ್ಪಡೆ
**1983:** ಯೆಲ್ಲಾಂಡು ಕ್ಷೇತ್ರದಿಂದ ಮೊದಲ ಬಾರಿ ಶಾಸಕ ಆಯ್ಕೆ
**2000:** ವಿದ್ಯುತ್ ಶುಲ್ಕ ಏರಿಕೆ ವಿರುದ್ಧ ರಾಜ್ಯವ್ಯಾಪಿ ಹೋರಾಟ
**2009:** ಐದನೇ ಬಾರಿ ಶಾಸಕನಾಗಿ ಆಯ್ಕೆ
**2024:** "ಗುಮ್ಮಡಿ ನರಸಯ್ಯ ಬಯೋಪಿಕ್" ಚಿತ್ರ ಬಿಡುಗಡೆ

### ಚಿತ್ರರಂಗದಲ್ಲಿ ನರಸಯ್ಯ

2024ರಲ್ಲಿ ನಿರ್ದೇಶಕ ಪರಮೇಶ್ವರ ಹಿವ್ರಾಲೆ ನಿರ್ದೇಶನದಲ್ಲಿ ಬಿಡುಗಡೆಯಾದ ಗುಮ್ಮಡಿ ನರಸಯ್ಯ ಬಯೋಪಿಕ್ ಚಿತ್ರದಲ್ಲಿ ನಟ ಸಮುತಿರಕಾನಿ ನರಸಯ್ಯ ಅವರ ಪಾತ್ರವನ್ನು ಜೀವಂತಗೊಳಿಸಿದ್ದಾರೆ. ಕನ್ನಡದ ಸೂಪರ್ ಸ್ಟಾರ್ ಶಿವರಾಜ್ ಕುಮಾರ್ ಅಭಿನಯದ ಹೊಸ ಚಲನಚಿತ್ರವೂ ನರಸಯ್ಯ ಅವರ ಜೀವನದಿಂದಲೇ ಪ್ರೇರಿತವಾಗಿದೆ.

### ಜನಮನದ ಪುಟಗಳಲ್ಲಿ ಅಕ್ಷಯ ಹೆಸರು

ಗುಮ್ಮಡಿ ನರಸಯ್ಯ ಅವರ ಬದುಕು ರಾಜಕಾರಣಕ್ಕಿಂತಲೂ ದೊಡ್ಡ ಅರ್ಥ ಹೊಂದಿದೆ. ಅವರು ಹೇಳಿದ ಸಂದೇಶ ಇಂದು ಸಹ ಪ್ರಸ್ತುತವಾಗಿದೆ. ತೆಲಂಗಾಣದ ಗಿರಿಜನ ಸಮುದಾಯಕ್ಕೆ ನೀಡಿದ ಅವರ ಕೊಡುಗೆಗಳು ಚಿರಸ್ಮರಣೀಯ. ಅವರ ಹೆಸರು ಜನಮನಗಳಲ್ಲಿ ಶಾಶ್ವತವಾಗಿ ಉಳಿಯಲಿದೆ.

# ನನ್ನ ನೆಚ್ಚಿನ ಪುಸ್ತಕ ಓದು ಅವಲೋಕನ ಕಾರ್ಯಕ್ರಮ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಮತ್ತು ಕಾಲೇಜು ವತಿಯಿಂದ ನನ್ನ ನೆಚ್ಚಿನ ಪುಸ್ತಕ ಓದು ಮತ್ತು ಅವಲೋಕನ ಕಾರ್ಯಕ್ರಮ ನಡೆಯಿತು.

ಸಮಾರಂಭ ಉದ್ಘಾಟಿಸಿದ ಸಾಹಿತಿ ರೂಪ ಹಾಸನ ಮಾತನಾಡಿ, ಪುಸ್ತಕವನ್ನು ಓದುವ ಮಹತ್ವ ಹಾಗು ಅದರಿಂದ ಆಗುವ ಪ್ರಯೋಜನ ಅತ್ಯಧಿಕವಾಗಿದೆ. ಪುಸ್ತಕ ಓದುವುದರಿಂದ ಜ್ಞಾನ ವೃದ್ಧಿಯಾಗಲಿದ್ದು, ಹೆಣ್ಣು ಮಕ್ಕಳು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅಧ್ಯಯನ ನೆರವಾಗುತ್ತದೆ ಎಂದರು.

ಪುಸ್ತಕಗಳಲ್ಲಿನ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ಬದುಕು ಕಟ್ಟಿಕೊಳ್ಳಬೇಕು. ಕವಿಗಳ, ಚಿಂತಕರ ಹಾಗು ಸಾಹಿತಿಗಳ ಪುಸ್ತಕಗಳನ್ನು ಓದಿ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಹೆಣ್ಣು ಮಕ್ಕಳ ಮೇಲೆ ಆಗುವ ದೌರ್ಜನ್ಯಗಳನ್ನು ಖಂಡಿಸಬೇಕು. ಹೆಣ್ಣು ಮಕ್ಕಳನ್ನು ಕೀಳಾಗಿ ನೋಡುವವರಿಗೆ ಶಿಕ್ಷೆ ಕೊಡಿಸುವ ಪಣ ತೊಡಬೇಕು ಎಂದು ತಿಳಿಸಿದರು.

ಜಿಲ್ಲಾ ಬರಹಗಾರರ ಸಂಘದ ಅಧ್ಯಕ್ಷ ಸುಂದೇಶ್ ಡಿ.ಉಡುವಾರೆ ಮಾತನಾಡಿ, ಪುಸ್ತಕ ಓದುವುದರಿಂದ ಅಂತರಂಗದ ಜ್ಞಾನ ಹೆಚ್ಚುತ್ತದೆ. ಹಲವಾರು ಸಾಹಿತಿಗಳ ಪುಸ್ತಕಗಳನ್ನು ಓದಿ ಆದರ್ಶ ಬೆಳೆಸಿಕೊಳ್ಳಬೇಕೆಂದರು.

ಪ್ರಾಂಶುಪಾಲರಾದ ಡಾ. ಕೆ.ಜಿ. ಕವಿತ ಅಧ್ಯಕ್ಷತೆ ವಹಿಸಿದ್ದರು. ಪ್ರಾಧಿಕಾರದ ಸದಸ್ಯ ಕುಶಾಲ್ ಬರಗೂರು, ಕನ್ನಡ ವಿಭಾಗದ ಮುಖ್ಯಸ್ಥ ಬಿ.ಹೆಚ್.ರಾಮೇಗೌಡ, ಪ್ರಾಧ್ಯಾಪಕರಾದ ಡಾ. ಹೆಚ್.ಕೆ.ವೆಂಕಟೇಶ್, ಶಿಲ್ಪಶ್ರೀ, ಎಸ್.ಯೋಗೇಶ್ ಹಾಗೂ ಇತರರಿದ್ದರು.

# ಇಂದಿನಿಂದ ಕೆಂಚಾಂಬ ದೇವಿ ಚಿಕ್ಕಜಾತ್ರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲ್ಲೂಕಿನ ಹರಿಹಳ್ಳಿ ಗ್ರಾಮದಲ್ಲಿರುವ ಹಾಸನಾಂಬ ದೇವಿಯ ಸಹೋದರಿ ಕೆಂಚಾಂಬ ದೇವಿಯ ಚಿಕ್ಕಜಾತ್ರೆ ಅ.25 ಮತ್ತು 26 ರಂದು ನಡೆಯಲಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಹೆಚ್.ಡಿ ಗೋಪಾಲ್ ತಿಳಿಸಿದ್ದಾರೆ.

ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಹೋಬಳಿಯ ಹರಿಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಪುರಾಣ ಪ್ರಸಿದ್ಧ ಶ್ರೀ ಕೆಂಚಾಂಬ ದೇವಿಯ ಜಾತ್ರೆಯನ್ನು ಸುತ್ತಮುತ್ತಲಿನ 48 ಹಳ್ಳಿಗಳ ಜನರು ಸೇರಿ ಆಚರಿಸಲಾಗುತ್ತದೆ. ಅ.25ರಂದು ರಾತ್ರಿ 8:30ಕ್ಕೆ ಮೂಲ ದೇವಸ್ಥಾನದಲ್ಲಿ ಸಪ್ತಮಾತೃಕಾಲಂಕಾರ, ಅಭಿಷೇಕ, ವಿಶೇಷ ಪೂಜೆ, ಮಹಾಮಂಗಳಾರತಿ, ಸುಗ್ಗಿ, ಉದ್ವಾರ್ಚನೆ ನಡೆಯಲಿದೆ ಎಂದು ಹೇಳಿದರು.

ಅ.26ರಂದು ಮೂಲದೇವಸ್ಥಾನದಿಂದ ದೇವಿಗೆ ಸಕಲ ಗೌರವಗಳೊಂದಿಗೆ ಮೆರವಣಿಗೆಯಲ್ಲಿ ದೇವಸ್ಥಾನದತ್ತ ಪ್ರಯಾಣ ಬೆಳೆಸಲಾಗುವುದು. ಮಧ್ಯಾಹ್ನ 1:30ಕ್ಕೆ ಮಹಾಮಂಗಳಾರತಿ, 2.30ಕ್ಕೆ ಕೆಂಡ ಹಾಯುವ ಕಾರ್ಯಕ್ರಮ ನಡೆಯುತ್ತದೆ. ನಂತರ ಬನ್ನಿಮಂಟಪಕ್ಕೆ ತೆರಳಿ, ವೀರಭದ್ರದೇವರೊಂದಿಗೆ ಪುನಃ ಕೆಂಡ ಹಾಯ್ದು ಗರ್ಭಗುಡಿಯಲ್ಲಿ ದರ್ಶನ ಪ್ರಾರಂಭವಾಗಿ ಭಕ್ತರಿಗೆ ದೇವಿಯ ಪಾದಮುಟ್ಟಿ ನಮಸ್ಕರಿಸಲು ರಾತ್ರಿವರೆಗೂ ಅವಕಾಶ ಕಲ್ಪಿಸಿಕೊಡಲಾಗಿದೆ ಎಂದು ತಿಳಿಸಿದರು.

ಜಾತ್ರೆಗೆ ಆಗಮಿಸುವ ಭಕ್ತ ಅನುಕೂಲಕ್ಕಾಗಿ ಹಾಸನ, ಸಕಲೇಶಪುರ, ಬಾಳ್ಳುಪೇಟೆ, ಕೊಡ್ಲಿಪೇಟೆಯಿಂದ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಮಾಡಲಾಗಿದೆ. ದಾಸೋಹ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸಮರ್ಪಕವಾಗಿ ಮಾಡಲಾಗಿದೆ. ಪೊಲೀಸ್ ಬಂದೋಬಸ್ತ್, ಆರೋಗ್ಯ ಇಲಾಖೆಯಿಂದ ಸ್ಥಳದಲ್ಲೇ ಪ್ರಥಮ ಚಿಕಿತ್ಸೆಯ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಕೆಂಚಾಂಬ ಅನ್ನದಾಸೋಹ ಸಮಿತಿ ವ್ಯವಸ್ಥಾಪನಾ ಸಮಿತಿಯ ಖಜಾಂಚಿ ನಾರಾಯಣ ಶರ್ಮಾ, ವ್ಯವಸ್ಥಾಪಕ ಲೋಕೇಶ್, ಮಾಜಿ ಸದಸ್ಯ ಸಿದ್ದಬಸವೇಗೌಡ, ರಾಜೇಶ್, ಮಲ್ಲಾಪುರ ಗ್ರಾಮ ಪಂಚಾಯಿತಿ ಸದಸ್ಯ ಚಂದ್ರಶೇಖರ, ದೇಗುಲದ ಅರ್ಚಕರ ಕುಟುಂಬ ಸದಸ್ಯರಾದ ಸತ್ಯನಾರಾಯಣ್, ಗ್ರಾಮಸ್ಥರಾದ ಷಣ್ಮುಖ, ಮಂಜುನಾಥ್ ಹಾಜರಿದ್ದರು.

# ಅ.30 ರಂದು ಯುವಜನೋತ್ಸವ

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈ ಭಾರತ್ ಕೇಂದ್ರ, ರಾಷ್ಟ್ರೀಯ ಸೇವಾ ಸಂಸ್ಥೆ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಹಾಸನಾಂಬ ಕಲಾಕ್ಷೇತ್ರ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಅ.30ರಂದು 2025-26ನೇ ಸಾಲಿನ ಹಾಸನ ಜಿಲ್ಲಾ ಮಟ್ಟದ ಯುವಜನೋತ್ಸವ ನೆರವೇರಲಿದೆ.

# ಸರಣಿ ಕಳ್ಳತನ: ಹೆಚ್ಚಿದ ಪೊಲೀಸ್ ಗಸ್ತು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಇತ್ತೀಚೆಗೆ ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮನೆ, ಅಂಗಡಿ ಹಾಗೂ ಕಾಫಿ ತೋಟಗಳಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾದ ಹಿನ್ನೆಲೆ ಎಚ್ಚೆತ್ತುಕೊಂಡ ಪೊಲೀಸರು, ರಾತ್ರಿ ವೇಳೆ ಗಸ್ತು ತಿರುಗುವುದು, ಅನುಮಾನಾಸ್ಪದ ವ್ಯಕ್ತಿಗಳ ತಪಾಸಣೆಯನ್ನು ತೀವ್ರಗೊಳಿಸಿದ್ದಾರೆ.

ಬೆಳಗ್ಗಿನ ಸಮಯಲ್ಲೇ ಮನೆಗಳಲ್ಲಿ ಸರಣಿ ಕಳ್ಳತನ, ರಾತ್ರಿ ವೇಳೆ ಒಂಟಿ ಮನೆಯಲ್ಲಿ ದರೋಡೆ, ಕೆಲ ದಿನಗಳ ಹಿಂದೆಯಷ್ಟೇ ಲಿಂಗಾಪುರ ಗ್ರಾಮದ ಅಂಗನವಾಡಿ ಕೇಂದ್ರಕ್ಕೂ ಕನ್ನ ಹಾಕಿ ಸಾವಿರಾರು ಮೌಲ್ಯದ ವಸ್ತುಗಳನ್ನು ದೋಚಲಾಗಿತ್ತು.

ಈ ಎಲ್ಲಾ ಘಟನೆಗಳಿಂದ ಎಚ್ಚೆತ್ತುಕೊಂಡ ಪೊಲೀಸರು ಇದೀಗ ರಾತ್ರಿ ಸಮಯದಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿರುವವರ ಬಗ್ಗೆ ನಿಗಾ ವಹಿಸಿ, ತಪಾಸಣೆ ನಡೆಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾದ ಹಿನ್ನಲೆ ಸ್ಥಳೀಯರಲ್ಲಿ ಆತಂಕ ಸೃಷ್ಟಿಯಾಗಿದೆ. ರಾತ್ರಿ ಸಮಯದಲ್ಲಿ ಮನೆ ಬಿಟ್ಟು ಹೊರಬರಲು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಜನರು ಆತಂಕ ವ್ಯಕ್ತಪಡಿಸಿದ್ದರಿಂದ ಅರೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಗಸ್ತು ಹೆಚ್ಚಿಸಿ ಅನುಮಾನಾಸ್ಪದ ವ್ಯಕ್ತಿಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ.

# ಭತ್ತದ ಗದ್ದೆಯಲ್ಲಿ ಕಾಡಾನೆಗಳ ದಾಂಧಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಒಂದೆಡೆ ಭಾರೀ ಮಳೆಯಿಂದ ಅಪಾರ ಪ್ರಮಾಣದ ಬೆಳೆ ಹಾನಿಯಾಗುತ್ತಿದ್ದರೆ, ಮತ್ತೊಂದೆಡೆ ಕಷ್ಟಪಟ್ಟು ಬೆಳೆದ ಫಸಲು ಕಾಡಾನೆಗಳ ಪಾಲಾಗುತ್ತಿದೆ.

ಸಕಲೇಶಪುರ ತಾಲ್ಲೂಕಿನ ಮರ್ಜನಹಳ್ಳಿ ಗ್ರಾಮದಲ್ಲಿ ಕಾಡಾನೆಗಳ ಹಿಂಡು ದಾಳಿ ನಡೆಸಿ ಭತ್ತದ ಗದ್ದೆಗಳನ್ನು ತುಳಿದು, ತಿಂದು ಹಾನಿಯುಂಟು ಮಾಡಿವೆ. ರಾಮಚಂದ್ರ ಮತ್ತಿತರರ ಭತ್ತದ ಗದ್ದೆಗೆ ಲಗ್ಗೆ ಇಟ್ಟಿರುವ ಕಾಡಾನೆಗಳು ಭತ್ತದ ಬೆಳೆ ಫಸಲಿಗೆ ಬರುವ ಮುನ್ನವೇ ನಾಶಪಡಿಸಿವೆ.



ಸಕಲೇಶಪುರ ತಾಲ್ಲೂಕಿನ ಕಾಮೇನಹಳ್ಳಿ ಗ್ರಾಮ ವ್ಯಾಪ್ತಿಯ ಚೆಟ್ಟಿಯರ್ ಕಾಡು, ಸುಂಡಳ್ಳಿ ಟಾಟಾ ಎಸ್ಟೇಟ್ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿರುವುದರಿಂದ ಕೂಲಿ ಕಾರ್ಮಿಕರಿಗೆ ಕೆಲಸ ಇಲ್ಲದಂತಾಗಿದೆ. ಕಾಡಾನೆಗಳಿಂದ ಈ ಭಾಗದ ನಲ್ಲುಲ್ಲಿ ಸೇರಿ ಸುತ್ತಮುತ್ತಲಿನ ಗ್ರಾಮಗಳ ಜನರು ಆತಂಕದಿಂದ ಓಡಾಡುವಂತಾಗಿದೆ.

ಹೆತ್ತೂರು ಮತ್ತು ಯಸಳೂರು ಹೋಬಳಿಯ ಮರ್ಕಳ್ಳಿ ಗ್ರಾಮದ ಕಲ್ಲುತೋಟ, ಕುಂಬ್ರಿನಿಯರ್ ಬಸರಿ ಹಡ್ಲು, ಬಾಳೆಕೆರೆ ಗ್ರಾಮದ ನೀಲಗಿರಿ ನಡುತೋಪು, ಕೊಂತನಮನೆ ಗ್ರಾಮದ ಮಣ್ಣುಗದ್ದೆ, ಕಡ್ರಳ್ಳಿ ಬೆಟ್ಟ, ಹುದಿನೂರು ಗ್ರಾಮದ ಸ್ವಾಮಿ ಬೆಟ್ಟ, ಮೆಕ್ಕಿರಮನೆ ಗ್ರಾಮದ ಹೆಗ್ಗೋಡ್ಲು, ಹಾಡ್ಯ ಗ್ರಾಮದ ದಿಣ್ಣೆಕೆರೆ ಹಡ್ಲು ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡು ಸ್ಥಳೀಯಲ್ಲಿ ಭಯ ಮೂಡಿಸಿವೆ. ಜೊತೆಗೆ ಕಾಫಿ ತೋಟಗಳಲ್ಲಿ ಅಡ್ಡಾದಿಡ್ಡಿ ಓಡಾಡಿ ಹಾನಿಯುಂಟು ಮಾಡಿವೆ.

ಆಲೂರು ತಾಲ್ಲೂಕಿನ ಬಲ್ಲೂರು ಬೆಟ್ಟಹಳ್ಳಿ ಫಾರೆಸ್ಟ್, ದೊಡ್ಡಬೆಟ್ಟ ಮೀಸಲು ಅರಣ್ಯ ಸುತ್ತಮುತ್ತ ಕಾಡಾನೆಗಳು ಕಣಿಸಿಕೊಂಡಿವೆ. ಇನ್ನು ಬೇಲೂರು ತಾಲ್ಲೂಕಿನ ಜಗಬೋರನಹಳ್ಳಿ ಫಾರೆಸ್ಟ್ ಜಗಬೋರನಹಳ್ಳಿ, ಬಿಕ್ಕೋಡು ಎಸ್ಟೇಟ್ ಬಿಕ್ಕೋಡು ಸುತ್ತಮುತ್ತ ಗಜಪಡೆ ಸಂಚಾರ ಇರುವುದರಿಂದ ರಾತ್ರಿ ಹೊತ್ತಿನಲ್ಲಿ ಜನರು ಓಡಾದಂತೆ ಮತ್ತು ಜನರು ಹಾಗೂ ಕೂಲಿ ಕಾರ್ಮಿಕರು ಎಚ್ಚರವಹಿಸುವಂತೆ ಆನೆ ಕಾರ್ಯಪಡೆ ಕಂಟ್ರೋಲ್ ರೂಮ್‌ನಿಂದ ಎಚ್ಚರಿಕೆ ನೀಡಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-25

**1415:** ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವೆ ಪ್ರಸಿದ್ಧ ಅಜಿಂಕೋರ್ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಇಂಗ್ಲೆಂಡ್‌ನ ರಾಜ ಹೆನ್ರಿ 5ಗೆ ಭಾರಿ ಜಯ ದೊರಕಿತು.

**1760:** ಜಾರ್ಜ್ ತೃತೀಯ ಬ್ರಿಟನ್‌ನ ರಾಜನಾದರು.

**1854:** ಕ್ರಿಮಿಯನ್ ಯುದ್ಧದ ಸಮಯದಲ್ಲಿ ನಡೆದ "ಚಾರ್ಜ್ ಆಫ್ ದ ಲೈಟ್ ಬ್ರಿಗೇಡ್" ಎಂಬ ಪ್ರಸಿದ್ಧ ದಾಳಿ ನಡೆಯಿತು. ಇದು ಇಂಗ್ಲಿಷ್ ಸೈನ್ಯದ ಧೈರ್ಯ ಮತ್ತು ದುರದೃಷ್ಟದ ಸಂಕೇತವಾಗಿ ಇತಿಹಾಸದಲ್ಲಿದೆ.

**1945:** ತೈವಾನ್ ಅನ್ನು ಜಪಾನ್‌ನಿಂದ ಮುಕ್ತಗೊಳಿಸಿ ಚೀನಾಕ್ಕೆ ಹಸ್ತಾಂತರಿಸಲಾಯಿತು.

**1971:** ಯುಎನ್‌ಒ (ಸಂಯುಕ್ತ ರಾಷ್ಟ್ರ ಸಂಘ) ಚೀನಾದ ಜನರ ಗಣರಾಜ್ಯವನ್ನು ಅಧಿಕೃತ ಸದಸ್ಯರಾಗಿ ಸ್ವೀಕರಿಸಿ, ತೈವಾನ್‌ನ ಸದಸ್ಯತ್ವವನ್ನು ರದ್ದುಗೊಳಿಸಿತು.

**2001:** ವಿಂಡೋಸ್ ಎಕ್ಸಪಿ ಅನ್ನು ಮೈಕ್ರೋಸಾಫ್ಟ್ ಅಧಿಕೃತವಾಗಿ ಬಿಡುಗಡೆ ಮಾಡಿತು.

### ಜನನ

**1806:** ಮ್ಯಾಕ್ಸ್ ಸ್ಟಿರ್ನರ್, ಜರ್ಮನ್ ತತ್ವಜ್ಞಾನಿ, ವೈಯಕ್ತಿಕ ಸ್ವಾತಂತ್ರ್ಯದ ಪರ ವಾದಿ

**1881:** ಪಾಬ್ಲೋ ಪಿಕಾಸೋ ಸ್ಪೇನ್ ಮೂಲದ ಪ್ರಸಿದ್ಧ ಚಿತ್ರಕಾರ ಮತ್ತು ಶಿಲ್ಪಿ

**1944:** ಮಿನು ಮನಮೋಹನ್ ಸಿಂಗ್, ಭಾರತದ ಮಾಜಿ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರ ಪತ್ನಿ

**1958:** ಬಾಲ್ ಠಾಕರೆ, ಶಿವಸೇನೆ ಪಕ್ಷದ ಸ್ಥಾಪಕ

### ಮರಣ

**1154:** ಇಂಗ್ಲೆಂಡ್‌ನ ರಾಜ ಸ್ಟೀಫನ್

**1400:** ಪ್ರಸಿದ್ಧ ಕವಿ ಜೆಫ್ರಿ ಚಾಸರ್, 'ದಿ ಕ್ಯಾಂಟರ್‌ಬರಿ ಟೇಲ್ಸ್' ಕೃತಿಯ ರಚನೆಕಾರ


# ಬಾಳೊಂದು ಚೈತ್ರಾಮಯ ತಿಳಿದು ನಡೆದರೆ ರಸಮಯ

**- ಬಿ.ಹೆಚ್. ತಿಮ್ಮಣ್ಣ ಮೈಸೂರು, ಹವ್ಯಾಸಿ ಬರಹಗಾರ**

'ಬಾಳು' ಎಂದರೆ ಒಂದು ಅರ್ಥಗರ್ಭಿತವಾದ ಜೀವನದ ರಸಾನುಭವ. ಬದುಕು ಬಂಗಾರವಾಗಲು ಪ್ರತಿದಿನವೂ ಹೊಸ ಚೈತನ್ಯ ತುಂಬಿದ ಸದಾ ಚಲನೆಯಲ್ಲಿರುವ ವ್ಯಕ್ತಿಯ ಜೀವನ ಚಕ್ರವು ದಿನನಿತ್ಯವೂ ಸಾಗುತ್ತಲೇ ಮುನ್ನುಗ್ಗುವಂತಿರಬೇಕು. ಮನುಷ್ಯರ ಜೀವನದ ಪ್ರತಿಯೊಂದು ಕ್ಷಣವು ಆನಂದಮಯವಾಗಿ, ಖುಷಿಯಿಂದ, ಲವಲವಿಕೆಯಿಂದ ಸಾಗುವಂತಿರಬೇಕು. ವ್ಯಕ್ತಿಯು ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ, ವಿಚಾರವಂತನಾಗಲೇಬೇಕು. ಈ ನಿಟ್ಟಿನಲ್ಲಿ ಓದುಗರಿಗೆ ಹೊಸ ರೀತಿಯ ವಿಷಯಗಳು ನಮಗೆ ಗೊತ್ತಿಲ್ಲದ ಎಷ್ಟೋ ವಿಚಾರಗಳನ್ನು, ವ್ಯಕ್ತಿಯ ಪರಿಚಯಗಳು, ಅವರ ಸಾಧನೆಗಳು ಹಾಗೂ ವೈಜ್ಞಾನಿಕ ಚಿಂತನೆಗಳು, ಸೃಜನಾತ್ಮಕ ಚಟುವಟಿಕೆ, ಎಷ್ಟೋ ಸಂಪ್ರದಾಯಗಳು ಮುಚ್ಚಿ ಹೋಗುತ್ತಿರುವ ಈ ಕಾಲದಲ್ಲಿ ಆಡಂಬರದ ಬದುಕು, ಮೂಢನಂಬಿಕೆ, ಕಂದಾಚಾರ, ಅನಿಷ್ಟ ಪದ್ಧತಿಗಳ ಬೆನ್ನ ಹಿಂದೆ ಬಿದ್ದು ದುಶ್ಚಟಗಳ ಬಲೆಯೊಳಗೆ ಸಿಲುಕಿ ನೆರಳಾಡುತ್ತಿರುವ ಈ ಮನುಕುಲ ಇದರಿಂದ ಬಿಡಿಸಿಕೊಂಡು ಆಚೆ ಬರಬೇಕು ಎನ್ನುವ ನಿಟ್ಟಿನಲ್ಲಿ ಸಕಲೇಶಪುರ ತಾಲ್ಲೂಕಿನ ಲೇಖಕರು, ಶಿಕ್ಷಕರು, ಪತ್ರಕರ್ತರು, ಬರಹಗಾರರು ಹಾಗೂ ಉದ್ದಿಮೆದಾರರಾಗಿ ಖ್ಯಾತಿಯನ್ನು ಪಡೆದುಕೊಂಡಿರುವ ವಿಶ್ವಾಸ ಡಿ.ಗೌಡರು ಹೊರತಂದಿರುವ ಲೇಖನಗಳ ಗುಚ್ಛವಾದ ಬಾಳೊಂದು ಚೈತ್ರಮಯ ನಮಗೆ ನಿದರ್ಶನವಾಗಿದೆ.

ಈ ಬಾಳೊಂದು ಚೈತ್ರಮಯ ಲೇಖನ ಕೃತಿಯು ಒಟ್ಟು 36 ಲೇಖನಗಳನ್ನು ಒಳಗೊಂಡಿದೆ. ಇವುಗಳನ್ನು ಓದುತ್ತಾ ಹೋದಂತೆಲ್ಲ ನಮ್ಮನ್ನು ದೀರ್ಘ ಆಳಕ್ಕೆ ಕರೆದೊಯ್ಯುತ್ತವೆ. ಒಂದೊಂದು ಲೇಖನವೂ ತುಂಬಾ ವಿಸ್ತಾರವಾದ ಚಿಂತನೆ ಮಾಡುವಂತಹ ವಿಷಯಗಳಿಂದ ಕೂಡಿಕೊಂಡಿವೆ. ಇಲ್ಲಿ ಲೇಖಕರಾದ ವಿಶ್ವಾಸ ಡಿ. ಗೌಡರನ್ನು ಮೆಚ್ಚಲೇಬೇಕು. ಈ ಕೃತಿಯಲ್ಲಿರುವ ಲೇಖನಗಳನ್ನು ನೋಡಿದರೆ ಒಬ್ಬ ಮಹಾನ್ ಪಂಡಿತರು, ವೇದಗಳ ಕಾಲದಲ್ಲಿದ್ದ ಜ್ಞಾನಿಗಳು ಕೂಡ ಊಹಿಸಲಾರದಂತಹ ವಿಷಯಗಳು ಇಲ್ಲಿ ನಮಗೆ ತೋರಿಸಿಕೊಟ್ಟಿದ್ದಾರೆ. ಇವರನ್ನು ನಾನು ಒಬ್ಬ ಪಂಡಿತ, ಜ್ಯೋತಿಷ್ಯ, ಪರಿಸರ ಪ್ರೇಮಿ,ಪ್ರಾಣಿತಜ್ಞ, ಪ್ರವಾಸಗಾರ, ವೈದ್ಯ, ಇಂಜಿನಿಯರ್ ಹಾಗೂ ಶಿಕ್ಷಣ ಪ್ರೇಮಿ ಅಂತಲೂ ಕರೆಯಬೇಕೆಂದೆನಿಸುತ್ತಿದೆ. ಏಕೆಂದರೆ ಇವರೆಲ್ಲರೂ ಮಾಡುವಂತಹ ಕಾರ್ಯವನ್ನು ಇಲ್ಲಿ ತಾವು ಒಬ್ಬರೇ ತಮ್ಮ ಅನುಭವದ ರಸಾನುವಾದಗಳನ್ನು ಈ ಒಂದು ಲೇಖನಗಳ ಹೊತ್ತಿಗೆಯಲ್ಲಿ ಚಿತ್ರಿಸಿದ್ದಾರೆ. ಇವುಗಳನ್ನು ಓದುತ್ತಾ, ಆನಂದಿಸುತ್ತಾ, ಅನುಭವಿಸುತ್ತಾ ಹೋದರೆ ಇವರ ಬಗ್ಗೆ ಸ್ವಲ್ಪ ಮಟ್ಟಿಗಾದರೂ ತಿಳಿಯುತ್ತದೆ.

ಇಲ್ಲಿ ಕಂಡು ಬರುವ ಒಂದು ಲೇಖನ ಟಿಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದು?ಟಿ ಎನ್ನುವುದು ಇದು ಕೇವಲ ಕಿವಿಯಿಂದ ಕೇಳಲು ಕಠೋರವೆನಿಸಬಹುದೇ ನೋ, ಆದರೂ ಕನ್ನಡಭಿಮಾನಿಗಳಾದ ನಾವು ಪ್ರಶ್ನಿಸಿಕೊಳ್ಳುವಂತದ್ದು, ಯಾಕಂದ್ರೆ ಬಾಯಿಂದ ಬರಿ ಕನ್ನಡ, ಕನ್ನಡ ಎಂದು ಜಂಭ ಕೊಚ್ಚಿಕೊಳ್ಳುತ್ತಿರುವ ನಾವುಗಳು ಮತ್ತು ನಮ್ಮ ಕನ್ನಡಪರ ಸಂಘಟನೆಗಳು,






ಹೋರಾಟಗಳು ಎಷ್ಟರಮಟ್ಟಿಗೆ ಕನ್ನಡವನ್ನು ಬಳಸುತ್ತಿದ್ದೇವೆ, ಉಳಿಸುತ್ತಿದ್ದೇವೆ ಎಂಬುದನ್ನು ತಿಳಿಯಬೇಕಾಗುತ್ತದೆ. ಕನ್ನಡದ ಬಗ್ಗೆ ಹೇಳುವುದಾದರೆ ದಿನಗಳು ಸಾಕಾಗಲ್ಲ, ಬರೆದರೆ ಪುಟಗಳು ಉಳಿಯಲ್ಲ ಹಾಗಿದೆ. ಆದ್ರೂ ನಾವು ನಮ್ಮ ಕನ್ನಡವನ್ನು ಬಳಸಿ, ಬೆಳೆಸಿ, ಉಳಿಸಿಕೊಂಡು ಹೋಗಬೇಕಾದ ಕರ್ತವ್ಯವಾಗಿದೆ.

ಗೌಡರನ್ನು ಒಬ್ಬ ತಜ್ಞರನ್ನಾಗಿ ನೋಡುತ್ತೇನೆ ಎಂದು ತಿಳಿಸಿದ್ದೆ. ಟಿಬ್ರಾಹ್ಮೀ ಮುಹೂರ್ತಟಿ ಎಂದರೆ ಎಷ್ಟೋ ಜನಗಳಿಗೆ ಗೊತ್ತೇ ಇಲ್ಲ. ಅದು ಇತ್ತೀಚಿನ ಆಧುನಿಕ ತಂತ್ರಜ್ಞಾನ ಯುಗದ ಯುವಕ ಯುವತಿಯರಿಗಂತೂ ದೂರದ ಮಾತಾಗಿದೆ. ಎಲ್ಲರೂ ಮೊಬೈಲ್‌ನ ಹಿಂದೆ ಬಿದ್ದು ಸಮಯದ ಪರಿವೇ ಇಲ್ಲದೆ ಬದುಕುತ್ತಿದ್ದಾರೆ. ರಾತ್ರಿ ಇಡೀ ಮೊಬೈಲ್ ನೋಡುವುದು ಮಧ್ಯರಾತ್ರಿಯ 2-3 ಗಂಟೆಗೆ ನಿದ್ದೆಗೆ ಜಾರೋದು. ಬೆಳಗ್ಗೆ 10-11ಗಂಟೆಗೆ ಎದ್ದೇಳುವುದಾಗಿದೆ. ತಮ್ಮ ಬದುಕಿನ ಅರ್ಧಾಯುಷ್ಯವನ್ನು ನಿದ್ದೆಯಲ್ಲಿ ಕಳೆಯುತ್ತಿದ್ದಾರೆ. ಅದರಿಂದ ಹೊರಬರುವುದು ಹೇಗೆಂದು ಎಷ್ಟೋ ಜನಗಳು ವಿಲವಿಲ ಒದ್ದಾಡುವಂತಹ ಸ್ಥಿತಿ ಎದುರಾಗಿದೆ. ಇಂಥವರಿಗೆ ಬ್ರಾಹ್ಮಿ ಮುಹೂರ್ತ ಎಂದರೆ ಹೇಗೆ ತಿಳಿದೀತು. ಇದರ ಬಗ್ಗೆ ಅರಿವು ಮೂಡಿಸುವುದಕ್ಕೆ ಈ ಒಂದು ಲೇಖನ ದಾರಿ ದೀಪವಾಗಿದೆ.

ಇಲ್ಲಿ ಸುಮಾರು ಲೇಖನಗಳು ಓದುಗರಿಗೆ ಹೊಸತನ್ನು ನೀಡುತ್ತವೆ. ಅವುಗಳಲ್ಲಿ ಕೆಲವು ಹೀಗಿವೆ. ಅವುಗಳಲ್ಲಿ ನೋಡುವುದಾದರೆ ತ್ಯಾಗ ಮಾಡುವುದನ್ನು ಕಲಿಯಿರಿ.! ಇಲ್ಲಿ ಒಬ್ಬ ಮಹಾನ್ ವ್ಯಕ್ತಿಯ ಬಾಲ್ಯದ ಕಥೆಯನ್ನೇ ತಿಳಿಸಿಕೊಟ್ಟಿದ್ದಾರೆ. ಹಾಗೆಯೇ ಸದಾ ಸತ್ಯವನ್ನೇ ಹೇಳಿ.! ದರ್ಬೆ ಹುಲ್ಲು ಮತ್ತು ದಕ್ಷಯಜ್ಞವಂತೂ ಒಂದು ಪೌರಾಣಿಕವಾದ ಕಥೆಯನ್ನು ಹೇಳುತ್ತದೆ. ಇದು ಎಷ್ಟೋ ಜನರಿಗೆ ಗೊತ್ತಿರದ ಸಂಗತಿ. ಅದನ್ನು ಇಲ್ಲಿ ತಿಳಿಸಿಕೊಟ್ಟಿದ್ದಕ್ಕೆ ತುಂಬಾ ಧನ್ಯವಾದಗಳು ಹೇಳುತ್ತೇನೆ. ಹಾಗೆಯೇ ಟಿಹುಟ್ಟು ಉಚಿತ ಸಾವು ಖಚಿತಟಿ ಎನ್ನುವಂತೆ ಪರಿಸರದಲ್ಲಿ ಉಸಿರಾಡುವ ಪ್ರತಿಯೊಂದು ಜೀವಿಗೆ ಹುಟ್ಟು ಅಂದ ಮೇಲೆ ಸಾವು ಇರಲೇಬೇಕು. ಯಾರು ಶಾಶ್ವತವಲ್ಲ ಎಂಬುದು ತಿಳಿದಿರಬೇಕು. ಹಾಗೆ ಇನ್ನು ಮುಂದೆ ಹೋದಂತೆ ಟಿಹಸುಟಿವನ್ನು ಗೋಮಾತೆಯೆಂದು ಪೂಜಿಸುವಂತಹ ಒಂದು ತಾಯಿ.ಇವಳನ್ನು ಹೇಗೆ ಹಟ್ಟಿ ಎಂಬ ಜೈಲಿನಲ್ಲಿ ಇಟ್ಟರೆ ಹೇಗೆ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ಇದಕ್ಕೆ ಪರ್ಯಾಯವಾಗಿ ಹೇಳಬೇಕೆಂದರೆ ಇತ್ತೀಚಿನ ನಗರವಾಸಿಯ ಹೆಣ್ಣು ಮಕ್ಕಳು ಎಂದು ಹೇಳಬಹುದು.

ಇನ್ನೂ ಪ್ರಕೃತಿಯ ನಾಶಕ್ಕೆ ಕೈಗಾರೀಕರಣ ಹೇಗೆ ಕಾರಣವಾಗುತ್ತಿದೆ ಎಂಬುದು ತಿಳಿಯಬೇಕು. ಇನ್ನು ಕ್ಷೇತ್ರ ಭೇಟಿಯಾದ ಶ್ರೀ ಕ್ಷೇತ್ರ ವರದಪುರ ಇದು ಎಷ್ಟೋ ಸುಮಾರು ಜನರಿಗೆ ಗೊತ್ತಿರದ ಒಂದು ಪುಣ್ಯ ಸ್ಥಳವಾಗಿದೆ.ಹಾಗೆಯೇ ಸಹ ಶಿಕ್ಷಣ ಎನ್ನುವಂತದ್ದು ಪರಕೀಯರಿಂದ ಪಡೆದುಕೊಂಡದ್ದು ಅಥವಾ ಬಂದದ್ದು ಹೇಗೆ ಎನ್ನುವುದನ್ನು ತಿಳಿಸಿದ್ದಾರೆ. ಹಾಗೆಯೇ ವಿಜಯದಶಮಿಯ ಬಗ್ಗೆಯಂತೂ ತುಂಬಾ ಹಿನ್ನೆಲೆ ಹೊಂದಿದ ಕಥೆಯನ್ನು ಇಲ್ಲಿ ಮುದ್ರಿಸಿದ್ದಾರೆ.

ಇತ್ತೀಚಿನ ಕಾಲದಲ್ಲಿ ಕೂಡು ಕುಟುಂಬ ಹೊಡೆದು ವಿಭಕ್ತ ಕುಟುಂಬಗಳು ಹೆಚ್ಚುತ್ತಿವೆ. ಇದರಿಂದ ಹಿರಿಯರ ಮತ್ತು ಕಿರಿಯರ ನಡುವಿನ ನಂಟಿನ ಸೇತುವೆ ಮುರಿದು ಬೀಳುತ್ತಿದೆ. ಅದು ಹಾಗಾಗಬಾರದೆಂದರೆ ನಾವುಗಳು ವಸುದೈವ ಕುಟುಂಬಕಂ ಪದ್ಧತಿಯನ್ನು ಪಾಲಿಸಬೇಕಾಗುತ್ತದೆ.

ಇನ್ನು ವೈದ್ಯರಾಗಿ ನೋಡುವುದಾದರೆ ಎಚ್ಚರ ಬ್ರೈನ್ ಸ್ಟ್ರೋಕ್. ಹೃದಯಘಾತ ಮತ್ತು ರಕ್ತದಾನ ಜೀವದಾನ. ಇವುಗಳಿಗೆಲ್ಲ ಮುಖ್ಯ ವ್ಯಾಯಾಮ ಮತ್ತು ಯೋಗ ಇವುಗಳ ಮಹತ್ವದ ಬಗ್ಗೆ ತುಂಬಾ ಮಾರ್ಮಿಕವಾಗಿ ನಮ್ಮ ಮುಂದೆ ಬಿಚ್ಚಿಟ್ಟಿದ್ದಾರೆ. ವ್ಯಕ್ತಿಗಳ ಪರಿಚಯ, ಹಬ್ಬಗಳ ಮಹತ್ವ ಹಾಗೂ ಇತ್ತೀಚಿಗಂತೂ ಲಕ್ಷಾನುಗಟ್ಟಲೆ ಖರ್ಚು ಮಾಡಿ ಮದುವೆ ಮಾಡಿಕೊಂಡು ಕ್ಷಣಮಾತ್ರದಲ್ಲಿ ವಿಚ್ಛೇದನಗಳಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅದಕ್ಕಾಗಿ ಮೊದಲು ಮನಸುಗಳ ಮಧ್ಯೆ ಮದುವೆಯಾಗಬೇಕು. ಇದನ್ನೇ ಕುವೆಂಪುರವರ ಮಂತ್ರ ಮಾಂಗಲ್ಯವು ತುಂಬಾ ಮಹತ್ವವನ್ನು ಪಡೆದುಕೊಂಡಿದೆ.

ಒಟ್ಟಾರೆಯಾಗಿ ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ರಹಸ್ಯಗಳು, ಜೀವನದ ಅನುಭವಗಳು, ಬಾಳು ಬಂಗಾರವಾಗಬೇಕೆಂದರೆ ಏನೆಲ್ಲ ಮಜಲುಗಳು, ಹಂತಗಳು,ದಾರಿಗಳು ಇದೆ ಎಂಬುದನ್ನು ಲೇಖಕರಾದ ವಿಶ್ವಾಸ ಡಿ. ಗೌಡರು ಪ್ರತಿಯೊಬ್ಬ ಪುಸ್ತಕ ಓದುವ ಪ್ರೇಮಿಗೆ ತಿಳಿಸುವಂತಹ ಕೆಲಸವನ್ನು ಮಾಡಿದ್ದಾರೆ. ಇದನ್ನು ಖರೀದಿ ಮಾಡಿ ಓದಿದರೆ ತುಂಬಾ ಪ್ರಯೋಜನಕ್ಕೆ ಬರಬಹುದೆಂದು ಎನಿಸುತ್ತದೆ. ದಿನದಲ್ಲಿ ಎಷ್ಟೆಷ್ಟೋ ಖರ್ಚು ಮಾಡಿ ಆರೋಗ್ಯ ಹದಗೆಡುವಂತಹ ತಿಂಡಿ, ತಿನಿಸು, ಊಟವನ್ನು ತಿಂದು ಹಾಳು ಮಾಡುವ ಬದಲು ಪುಸ್ತಕದ ಗೆಳೆತನವನ್ನು ಬೆಳೆಸಿ ಮುಂದೊಂದಿನ ಹೊಟ್ಟೆ ತುಂಬಾ ಅನ್ನ ನೀಡುತ್ತದೆ ಎಂದು ನಂಬಿರುವ ಕಂದ ನಾನು. ಈ ಪುಸ್ತಕವನ್ನು ಜೀವಂತಿಕೆಯಲ್ಲಿರಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಕೈಯಲ್ಲಿದೆ. ಬರಹಗಾರರಿಗೆ ನನ್ನದೊಂದು ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಇವತ್ತಿನ ದಿನಮಾನದಲ್ಲಿ ಟಿಈಗ ಸ್ನೇಹವಾಗಿ ನಾಳೆ ಮುಗಿದು ಹೋಗುವ ಗೆಳೆತನಕ್ಕಿಂತ ಸದಾ ನಮ್ಮೊಟ್ಟಿಗೆ ಕೊನೆಯವರೆಗೂ ಇರುವ ಪುಸ್ತಕದ ಜೊತೆ ಗೆಳೆತನ ಬೆಳೆಸಿಕೊಳ್ಳಿಟಿ ಎಂದು ಹೇಳಲು ಇಚ್ಛಿಸುತ್ತೇನೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248